C.R.P.67

Form No.4 (Civil)
Deposition Sheets
(R.P.No.57)

**2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಸಂಖ್ಯೆ:101/2023 C/W 113/2023**

ಪ್ರಾಸಾ. **08** ಚಾಸಾ. **07**

| | |
|---|---|
| ಸಾಕ್ಷಿದಾರರ ಹೆಸರು | ಧರೇಶ |
| ತಂದೆಯ ಹೆಸರು | ಎಂ ಬಸವಲಿಂಗಶೆಟ್ಟಿ |
| ವಯಸ್ಸು | 59 ವರ್ಷಗಳು |
| ಉದ್ಯೋಗ | ವ್ಯಾಪಾರ |
| ವಾಸ | ಕೆ.ಎಂ.ದೊಡ್ಡಿ |

**ಸಾಕ್ಷಿಯನ್ನು ದಿನಾಂಕ:04.06.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ನ್ಯಾಯಾಲಯದ ಮುಂದೆ ಇರುವ ಆರೋಪಿತರು ಗೊತ್ತಿಲ್ಲ. ಸದರಿಯವರನ್ನು ಈ ಹಿಂದೆ ನೋಡಿರುವುದಿಲ್ಲ. ನಾನು ದೇವರಹಳ್ಳಿ ರಸ್ತೆಯ ಗೌಡಯ್ಯನದೊಡ್ಡಿ ಗ್ರಾಮದ ಶಂಕರೇಗೌಡ ಎಂಬುವವರ ಮನೆಯಲ್ಲಿ ವಾಸವಾಗಿದ್ದೆ. ಚಾಸಾ-9 ಗೊತ್ತಿಲ್ಲ. ನಾನು ಯಾವುದೇ ಘಟನೆ ನೋಡಿರುವುದಿಲ್ಲ. ಪೊಲೀಸರು ನನ್ನ ವಿಚಾರಣೆ ಮಾಡಿರುವುದಿಲ್ಲ ಮತ್ತು ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಆರೋಪಿತರು ಮೃತನ ಮೇಲೆ ಜಮೀನಿನಲ್ಲಿ ಹಲ್ಲೆ ಮಾಡಿರುವುದನ್ನು ನಾನು ನೋಡಿರುವುದಿಲ್ಲ. ಮು.ಮ.6 ರಿಂದ 8 ನ್ನು ಗುರುತಿಸಲು ಆಗುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಕಡತದಲ್ಲಿರುವ ಅಂಶಗಳನ್ನು ಪರಿಗಣಿಸಲಾಗಿ ಸಾಕ್ಷಿದಾರರು ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿರುವುದು ಕಂಡುಬರುತ್ತದೆ. ಈ ಕಾರಣದಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರನ್ನು

ಪಾಟೀ ಸವಾಲಿಗೆ ಒಳಪಡಿಸಲು ಮಾನ್ಯ ಸರ್ಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ದಿನಾಂಕಃ20.11.2022 ರಂದು ನಮ್ಮ ಅಂಗಡಿಯಿಂದ ಸುಮಾರು ಸಂಜೆ 4.30 ಗಂಟೆ ಸಮಯದಲ್ಲಿ ನನ್ನ ಮನೆಗೆ ಹೋಗುತ್ತಿದ್ದಾಗ ನ್ಯಾಯಾಲಯದ ಮುಂದೆ ಇರುವ 1 ರಿಂದ 7 ನೇ ಆರೋಪಿತರು ಒಬ್ಬ ಹುಡುಗನನ್ನು ಸುತ್ತುವರಿದು ಆತನಿಗೆ ಬಾಯಿಗೆ ಬಂದಂತೆ ಬೈದು ಮತ್ತು ಕಾಲಿನಿಂದ ಹೊಡೆದ ರಭಸಕ್ಕೆ ಆತ ಗಿಡಗಳಿದ್ದ ಇಳಿಜಾರಿನ ಕಡೆಗಾದಂತೆ ಬಿದ್ದು ಹೋದನು ಎಂದರೆ ಸರಿಯಲ್ಲ. ಆಗ ಎಲ್ಲಾ ಆರೋಪಿತರು ಅವನಿಗೆ ಕೈಯಿಂದ, ಕಾಲಿನಿಂದ ತುಳಿಯುತ್ತಿದ್ದರು ಎಂದರೆ ಸರಿಯಲ್ಲ. ನಂತರ ಎಲ್ಲರೂ ತಳ್ಳಾಡಿಕೊಂಡು ನಮ್ಮ ಗದ್ದೆಗೆ ಬಂದರು ಎಂದರೆ ಸರಿಯಲ್ಲ. ನಾವು ಕುಳಿತುಕೊಳ್ಳಲು ಉಪಯೋಗಿಸುತ್ತಿದ್ದ ಗೊದಮೊಟ್ಟೆಯನ್ನು ಎತ್ತಿಕೊಂಡು ಆ ಹುಡುಗನಿಗೆ ಹೊಡೆದಾಗ ಕೆಳಗೆ ಬಿದ್ದು ಕೊಂಡ ಎಂದರೆ ಸರಿಯಲ್ಲ. ನಂತರ ಇನ್ನೊಬ್ಬ ಹುಡುಗ ಬೆನ್ನಿನ ಹಿಂಭಾಗಕ್ಕೆ ತಲೆಯ ಹಿಂಭಾಗಕ್ಕೆ ಹೊಡೆದಾಗ ಟಪ್ ಎಂಬ ಸೌಂಡ್ ಬಂದು ನಂತರ ಎಲ್ಲರೂ ಸ್ಕೂಟರ್ ಮತ್ತು ಆಟೋವನ್ನು ಹತ್ತಿಕೊಂಡ ಹೋದರು ಎಂದರೆ ಸರಿಯಲ್ಲ. ಒಬ್ಬ ಹುಡುಗ ಜಗಳ ಬಿಡಿಸುತ್ತಿದ್ದ ಎಂದರೆ ಸರಿಯಲ್ಲ. ನಂತರ ಹಲ್ಲೆಗೆ ಒಳಗಾದ ಹುಡುಗನನ್ನು ಚಿಕಿತ್ಸೆಗೆಂದು ಕೆ.ಎಂ. ದೊಡ್ಡಿ ಆಸ್ಪತ್ರೆಗೆ ದಾಖಲು ಮಾಡಿ, ನಂತರ ಮೈಸೂರಿನ ಆಸ್ಪತ್ರೆಗೆ ದಾಖಲು ಮಾಡಿದಾಗ ಆತ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುತ್ತಾನೆ ಎನ್ನುವ ವಿಚಾರ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ನನ್ನ ಜಮೀನಿನಲ್ಲಿ ಘಟನೆ ನಡೆದಿದ್ದ ಬಗ್ಗೆ ಪೊಲೀಸರ ಮುಂದೆ ಈಗ ಓದಿ ಹೇಳಿದ ಪ್ರಕಾರ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-19 ಎಂದು ಗುರುತಿಸಲಾಯಿತು. ನಂತರ ಆರೋಪಿತರನ್ನು ಪೊಲೀಸ್ ಠಾಣೆಯಲ್ಲಿ ಗುರುತಿಸಿ, ಈಗ ಓದಿ ಹೇಳಿದ ಪ್ರಕಾರ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-20 ಎಂದು ಗುರುತಿಸಲಾಯಿತು. ನಾನು ಘಟನೆಯನ್ನು ಕಣ್ಣಾರೆ ನೋಡಿ ಆರೋಪಿತರು ಮು.ಮ.6 ರಿಂದ 8 ಮೃತ ಅರುಣ ರವರ ಮೇಲೆ ಹಲ್ಲೆ ಮಾಡಿದ್ದರಿಂದ ತೀರಿಕೊಂಡಿದ್ದಾನೆ ಎನ್ನುವ ವಿಚಾರ ಗೊತ್ತಿದ್ದರೂ ಸಹ ಮತ್ತು ನಿಪಿ-19 ಮತ್ತು 20 ರಂತೆ ಹೇಳಿಕೆ ನೀಡಿದ್ದರೂ ಸಹ ಅಕ್ಕ-ಪಕ್ಕದ ಊರಿನವರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>

ಆರೋಪಿತರ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇರುವುದಿಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

2 ನೇ ಅಪರ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮಂಡ್ಯ.